ಮತ್ತು ತನಿಖಾಧಿಕಾರಿ, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ಅಡ್ವೋಕೇಟ್ ಜನರಲ್ ಅವರ ಬಳಿ ಚರ್ಚಿಸಿರುತ್ತೇನೆ. ಲೋಕಾಯುಕ್ತ ಕಛೇರಿ ಮತ್ತು ಸರ್ಕಾರದ DPAR ಇಲಾಖೆಯಿಂದ ಕೆಲ ಮಾಹಿತಿಗಳನ್ನು ಪಡೆಯಲಿಚ್ಚಿಸಿರುತ್ತೇನೆ. ಪ್ರಸ್ತಾವದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಈಗ ವರದಿಯನ್ನೊಪ್ಪಿಸುವುದು. ತನ್ವೀರ್ ಸೇಠ್, ಇಲ್ಲ. ಡಾ: ರಫೀಕ್ ಅಹಮದ್ ಕೇಳಿ.

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಕದ್ದುಮುಚ್ಚಿ ಡಾಕ್ಯುಮೆಂಟ್ಸ್ ಕೊಟ್ಟು, ಇವತ್ತು ಯಾವ್ಯಾವ ಡಾಕ್ಯುಮೆಂಟ್ಸ್ ಕೊಟ್ಟಿದ್ದಾರೆಂದು ಪಬ್ಲಿಕ್ ಮಾಡಿ. ಲೋಕಾಯುಕ್ತ ಸಂಸ್ಥೆಯನ್ನು ಮುಚ್ಚಿಹಾಕುವಂತಹ ಕೆಲಸ ಮಾಡಿದ್ದಾರೆ. ಸುರೇಶ್ ಕುಮಾರ್ ಅವರು ಡಾಕ್ಯುಮೆಂಟ್ಸ್ ಕೇಳಿದ್ದಾರೆ.

7. ವರದಿಯನ್ನೊಪ್ಪಿಸುವುದು

ಡಾ: ಎಸ್. ರಫೀಕ್ ಅಹ್ಮದ್: ಮಾನ್ಯ ಅಧ್ಯಕ್ಷರೆ, ಅಕ್ರಮ ಮರಳು ಗಣಿಗಾರಿಕೆ ಸಂಬಂಧ ರಚಿಸಲಾಗಿರುವ ವಿಧಾನಸಭಾ ಸದಸ್ಯರ ಅಧ್ಯಯನ ತಂಡದ ಸಮಿತಿಯ ಅಧ್ಯಕ್ಷನಾಗಿರುವ ನಾನು ಅಕ್ರಮ ಮರಳು ಗಣಿಗಾರಿಕೆ ಸಂಬಂಧ ರಚಿಸಲಾಗಿರುವ ವಿಧಾನಸಭಾ ಸದಸ್ಯರ ಅಧ್ಯಯನ ತಂಡದ ಮಧ್ಯಂತರ ವರದಿಯನ್ನು ಮಂಡಿಸುತ್ತೇನೆ

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಜಗದೀಶ್ ಶೆಟ್ಟರ್: ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಲೋಕಾಯುಕ್ತ ಸಂಸ್ಥೆಯನ್ನು ಮುಚ್ಚಿ ಹಾಕುವುದಕ್ಕೆ ಹೊರಟಿದ್ದೀರಿ. ಇದನ್ನು ನಾವು ವಿರೋಧ ಮಾಡುತ್ತೇವೆ. ಈ ಮೋಷನ್ ಅನ್ನು ನಾವು ವಿರೋಧ ಮಾಡುತ್ತೇವೆ.

ಅಧ್ಯಕ್ಷರು: ಈಗ ಸಭೆಯ ಮುಂದಿಡಲಾಗದ ಕಾಗದ ಪತ್ರಗಳು, ರಮಾನಾಥ ರೈ ರವರೆ ಕೇಳಿ.

8. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಟಿ. ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ,

1. ಶ್ರೀ ಯು. ಟಿ. ಖಾದರ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1. 1978ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮದ ಪ್ರಕರಣ 8 (3) ರ ಮೇರೆಗೆ:

2015ರ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು (ಹಿರಿಯ ವೈದ್ಯಾಧಿಕಾರಿಗಳು, ತಜ್ಞರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ದಂತ ಆರೋಗ್ಯಾಧಿಕಾರಿಗಳು ನೇಮಕಾತಿ) (ವಿಶೇಷ) ನಿಯಮಗಳನ್ನು ರಚಿಸಿ ದಿನಾಂಕ; 15.07.2015 ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ; ಹೆಚ್.ಎಫ್.ಡಬ್ಲ್ಯೂ/38/ಹೆಚ್ ಎಸ್‌ಹೆಚ್/2015.

2. 2012ರ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮದ 2,3,4 ಮತ್ತು 5ನೇ ಪ್ರಕರಣಗಳ ಮೇರೆಗೆ:

2015ರ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸುವ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ಸಮಾಲೋಚನೆ, ಹಂಚಿಕೆ ಮತ್ತು ಪ್ರಮಾಣ ಪತ್ರ) ನಿಯಮಗಳನ್ನು ರಚಿಸಿ ದಿನಾಂಕ: 24.07.2015ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/249/ಹೆಚ್‌ಎಸ್‌ಹೆಚ್/2015.

ಅಧ್ಯಕ್ಷರು: ಮಂಡಿಸಲಾಯಿತು.